

ಮರೆತ್ವಿ. ಲ್ಯಾಪ್‌ಟಾಪ್ ಆಫ್ ಆದ್ರೆ ಪ್ಲಗ್ ಚೆಕ್ ಮಾಡ್ತೀವಿ. ಸಂಬಂಧ ಮೌನವಾದ್ರೆ ಯಾರೂ ಚೆಕ್ ಮಾಡಲ್ಲ.

ಒಮ್ಮೆ ಅಪ್ಪ ಹೇಳಿದರು; ಮೊಬೈಲ್ ಇಲ್ಲದಿದ್ದಾಗಲೂ ನಾವು ಬದುಕಿದ್ವಿ. ನಾನು ಮನಸ್ಸಿನಲ್ಲಿ ಯೋಚಿಸಿದೆ ಹೌದು ಆದ್ರೆ ನೀವು ಒಬ್ಬರಿಗೊಬ್ಬರು ಬದುಕ್ತಾ ಇದ್ದಿರಿ. ಇವತ್ತು ಫೋಟೊ ತೆಗೆಯೋಕೆ ಕ್ಷಣ. ಆ ಕ್ಷಣ ಬದುಕೋಕೆ ಸಮಯ ಇಲ್ಲ. ಸ್ಟೋರಿಯಿದೆ. ನೆನಪು ಕಡಿಮೆ. ತಾಂತ್ರಿಕತೆ ನಮ್ಮನ್ನು ಹತ್ತಿರ ತಂದಿಲ್ಲ. ಅದು ನಮ್ಮ ನಡುವಿನ ಅಂತರವನ್ನು ಸ್ಪಷ್ಟವಾಗಿ ತೋರಿಸಿತು ಅಷ್ಟೆ. ಆ ರಾತ್ರಿ ಲ್ಯಾಪ್‌ಟಾಪ್ ಮುಚ್ಚಿದಾಗ ಒಂದು ವಿಚಿತ್ರ ಶಾಂತಿ. ನೋಟಿಫಿಕೇಶನ್ ಇಲ್ಲ. ಅಲರ್ಟ್ ಇಲ್ಲ. ಕೇವಲ ಮನಸ್ಸು. ಆ ಕ್ಷಣದಲ್ಲಿ ನನಗೆ ಅರ್ಥ ಆಯ್ತು ಯಂತ್ರಗಳು ತಪ್ಪು ಮಾಡಿದ್ರೆ ರೀಸ್ಟಾರ್ಟ್ ಮಾಡಬಹುದು. ಸಂಬಂಧಗಳು ಮೌನವಾದ್ರೆ ನಾವು ಮಾತಾಡಲೇಬೇಕು. ತಾಂತ್ರಿಕತೆ ಶತ್ರುವಲ್ಲ. ಅದು ಸಾಧನ. ಆದ್ರೆ ಸಂಬಂಧಗಳು ಆಪ್ ಅಲ್ಲ. ಅಪ್‌ಡೇಟ್ ಮಾಡಿದ್ರೆ ಸಾಕು ಅನ್ನೋದು ಇಲ್ಲ. ಅವುಗಳನ್ನ ಕೇಳಬೇಕು. ಕಾಲ ಕೊಡಬೇಕು. ಕೆಲವೊಮ್ಮೆ ಚಾರ್ಜರ್ ತೆಗೆದು ಇಟ್ಟು ಮುಖ ನೋಡಿ ನಗಬೇಕು ಅದೇ ನಿಜವಾದ ಕನೆಕ್ಷನ್.

ಅಂದು ಆ ಘಟನೆ ಆದ ಮೇಲೆ ನನಗೆ ಒಂದು ವಿಚಿತ್ರ ಅಭ್ಯಾಸ ಶುರುವಾಯಿತು. ಯಂತ್ರಗಳನ್ನ ನೋಡ್ತಾ ನಾನು ನನ್ನನ್ನೇ ಅಳೆಯೋದು ಲ್ಯಾಪ್‌ಟಾಪ್ ವೇಗವಾಗಿ ಕಲಿತುಕೊಳ್ಳುತ್ತೆ ನಾನು ನಿಧಾನವಾಗಿ ಮರೆತುಬಿಡ್ತಿದ್ದೇನೆ. ಅದು ಪ್ರತಿದಿನ ಹೊಸದಾಗ್ತಿದೆ. ನಾನು ಮಾತ್ರ ಅದೇ ತಪ್ಪುಗಳನ್ನು ಹೊಸ ಹೆಸರಿನಲ್ಲಿ ಮರುಮಾಡ್ತಿದ್ದೇನೆ. ತಾಂತ್ರಿಕತೆ ನಮಗೆ ಆಯ್ಕೆ ಕೊಟ್ಟಿದೆ. ಏನು ಬೇಕಾದರೂ ತಪ್ಪಿಸಿಕೊಳ್ಳೋ ಆಯ್ಕೆ. ಮಾತಾಡೋದು ಬೇಡ ಅಂದ್ರೆ ಮೆಸೇಜ್. ಕೇಳೋದು ಬೇಡ ಅಂದ್ರೆ ಮ್ಯೂಟ್. ಅನುಭವಿಸೋದು ಕಷ್ಟ ಅಂದ್ರೆ ಸ್ಕ್ರೋಲ್. ನಾವು ಈಗ ನೋವನ್ನೂ ಸ್ವೈಪ್ ಮಾಡ್ತೀವಿ. ಅಸಹನೆಯನ್ನು ಸ್ಕಿಪ್ ಮಾಡ್ತೀವಿ. ಮನುಷ್ಯನನ್ನೇ ಒಂದು ಅಪ್ಲಿಕೇಶನ್ ತರಹ ಬಳಸಿ ಮುಚ್ಚಿಬಿಡ್ತೀವಿ. ಮನೆ ಕೂಡ ಹಾಗೇ ಆಯ್ತು. ಒಂದೇ ಸೂರಿನಡಿ ಪ್ರತ್ಯೇಕ ಜಗತ್ತುಗಳು. ಎಲ್ಲರಿಗೂ ಸಮಯ ಕಡಿಮೆ. ಆದ್ರೆ ದೂರುಗಳಿಗೆ ಮಾತ್ರ ಎಂದಿಗೂ ಕೊರತೆ ಇಲ್ಲ. ನೀನು ಬದಲಾಗಿದ್ದೀಯ. ನಿನಗೆ ಯಾರೂ ಮುಖ್ಯವಿಲ್ಲ. ಹಳೆಯ ನೀನು ಹೀಗೆ ಇರಲಿಲ್ಲ. ಈ ಮಾತುಗಳೆಲ್ಲ ಮುಖಾಮುಖಿಯಾಗಿ ಬರಲಿಲ್ಲ. ಅವು ಮೆಸೇಜ್ ಆಗಿ ಬಂದವು. ಸ್ಟೇಟಸ್ ಆಗಿ ಉಳಿದವು. ಮಾತಾಗಿ ಒಡೆದಿಲ್ಲ.

ನನಗೆ ಆಗ ಅರ್ಥ ಆಯ್ತು ತಾಂತ್ರಿಕತೆ ನಮ್ಮ ಜೀವನವನ್ನು ಸುಲಭ ಮಾಡಲಿಲ್ಲ. ಅದು ನಮ್ಮ ತಪ್ಪಿಸಿಕೊಳ್ಳುವಿಕೆಗಳನ್ನು ಸರಳ ಮಾಡಿದೆ. ಹಳೆಯ ಕಾಲದಲ್ಲಿ ಒಬ್ಬರನ್ನೊಬ್ಬರು ತಪ್ಪಿಸಿಕೊಳ್ಳೋಕೆ ಬಾಗಿಲು ಮುಚ್ಚಬೇಕಿತ್ತು. ಇವತ್ತು ಸ್ಕ್ರೀನ್ ಸಾಕು. ನಾವು ಯಂತ್ರಗಳನ್ನು ಮನುಷ್ಯರಿಗಿಂತ ಹೆಚ್ಚು ಅರ್ಥ ಮಾಡ್ಕೊಳ್ಳೋ ಹಂತಕ್ಕೆ ಬಂದಿದ್ದೇವೆ. ಅವುಗಳ ಸೂಚನೆ ಓದ್ತೀವಿ. ಎಚ್ಚರಿಕೆ ಕೇಳ್ತೀವಿ. ಅಪ್‌ಡೇಟ್ ಮಾಡ್ತೀವಿ. ಆದ್ರೆ ಪಕ್ಕದಲ್ಲಿರುವ ಮನುಷ್ಯನ ನೋಟ ಓದೋದಕ್ಕೆ ಸಮಯ ಇಲ್ಲ. ಆ ದಿನ ನನಗೆ ಸ್ಪಷ್ಟವಾಯ್ತು ತಾಂತ್ರಿಕತೆ ಸಮಸ್ಯೆ ಅಲ್ಲ. ಅದಕ್ಕೆ ಕೊಟ್ಟ ಸ್ಥಾನವೇ ಸಮಸ್ಯೆ. ಯಂತ್ರಗಳು ನಮ್ಮ ಜೀವನದ ಭಾಗವಾಗಲಿ, ಮಧ್ಯವಾಗಬೇಡ.

ಸಂಬಂಧಗಳು ಪಕ್ಕದ ಆಯ್ಕೆಯಾಗಬಾರದು ಅವು ಕೇಂದ್ರವಾಗಬೇಕು. ಯಾಕೆಂದ್ರೆ ಯಂತ್ರಗಳು ನಾವಿಲ್ಲದಿದ್ರೂ ಕೆಲಸ ಮಾಡುತ್ತವೆ. ಆದ್ರೆ ನಾವಿಲ್ಲದೇ ಸಂಬಂಧಗಳು ಉಳಿಯುವುದಿಲ್ಲ. ಅದೇ ನನ್ನ ಕಥೆಯ ಅಂತ್ಯ. ಅದೇ ನನ್ನ ಕಲಿಕೆ. ತಂತ್ರಜ್ಞಾನ ಮುಂದುವರೆಯುತ್ತದೆ. ನಾವು ಮಾತ್ರ ಒಬ್ಬರಿಗೊಬ್ಬರು ಹಿಂತಿರುಗಬೇಕು. ಅಲ್ಲೇ ಮಾನವತೆ ಆನ್ ಆಗುತ್ತದೆ. ಈ ಅರಿವು ಒಮ್ಮೆ ಬಂದ ಮೇಲೆ ಜೀವನ ತಕ್ಷಣ ಬದಲಾಗಲಿಲ್ಲ. ಯಾಕೆಂದ್ರೆ ಅರಿವು ಬದಲಾವಣೆ ಅಲ್ಲ. ಅದು ಆರಂಭ. ಮತ್ತೆ ಮತ್ತೆ ನಾನು ಹಳೆಯದಕ್ಕೆ ಹೋಗ್ತೇನೆ. ಸ್ಕ್ರೀನ್ ಹಿಡಿದುಕೊಳ್ತೇನೆ. ಮೌನವನ್ನು ತಪ್ಪಿಸಿಕೊಳ್ತೇನೆ. ಆದ್ರೆ ಈಗ ಒಂದು ವ್ಯತ್ಯಾಸ ಇದೆ. ನಾನು ತಪ್ಪಿಸಿಕೊಂಡಾಗ ಅದು ನನಗೆ ಗೊತ್ತಾಗ್ತಿದೆ. ಒಬ್ಬರು ಮಾತಾಡ್ತಿದ್ದಾಗ ನಾನು ಅರ್ಧ ಕೇಳ್ತಿದ್ದರೆ ಮನಸ್ಸು ಒಳಗೇ ಎಚ್ಚರಿಸುತ್ತದೆ. ಇದು ಯಂತ್ರದ ಅಭ್ಯಾಸ ಅಂತ. ಮನೆಲಿ ಕೂತಿದ್ದರೂ ಮನಸ್ಸು ಹೊರಗಿದ್ದರೆ ಒಂದು ಅಸಹಜತೆ ಕಾಡುತ್ತದೆ. ಹಿಂದೆ ಹಾಗಿರಲಿಲ್ಲ. ಬಹುಶಃ ಮಾನವ ಸಂಬಂಧಗಳ ಸುಂದರ ಭಾಗ ಇದೇ ಅವು ನಮ್ಮನ್ನು ಪರಿಪೂರ್ಣ ಮಾಡೋದಿಲ್ಲ. ಎಚ್ಚರವಾಗಿರಿಸುತ್ತವೆ. ನಾವು ಎಲ್ಲವನ್ನೂ ಸರಿಪಡಿಸೋಕೆ ಆಗಲ್ಲ. ಎಲ್ಲರಿಗೂ ಸಮಯ ಕೊಡೋಕೆ ಆಗಲ್ಲ.

ಎಲ್ಲಾ ಮಾತುಗಳನ್ನೂ ಹೇಳೋಕೆ ಆಗಲ್ಲ. ಆದ್ರೆ ಒಮ್ಮೆ ನಿಂತು ಮುಖ ನೋಡಿ ನಾನು ಇಲ್ಲೇ ಇದ್ದೀನಿ ಅನ್ನೋದನ್ನು ತೋರಿಸಬಹುದು. ಅದಕ್ಕೆ ಹೊಸ ಸಾಧನ, ಹೊಸ ಜ್ಞಾನ ಬೇಡ. ಹೊಸ ಆ್ಯಪ್ ಬೇಡ. ಕೇವಲ ಹಳೆಯ ಮಾನವ. ಅದೇ ಸಾಕು. ತಾಂತ್ರಿಕತೆ ಮುಂದೆಯೂ ಬೆಳೆಯುತ್ತೆ. ನಾವು ಅದರ ಜೊತೆ ನಡೆಯಲೇಬೇಕು. ಆದ್ರೆ ನಮ್ಮ ನೆರಳು ಕಳೆದುಕೊಳ್ಳದೆ. ಯಾಕಂದ್ರೆ ನೆರಳು ಇಲ್ಲದ ಮನುಷ್ಯ ಬೆಳಕಿನಲ್ಲೂ ಒಂಟಿ. ಇಲ್ಲಿ ನಾನು ನಿಲ್ಲಿಸುತ್ತೇನೆ. ಪೂರ್ಣ ಉತ್ತರ ಸಿಕ್ಕಿದ್ದಕ್ಕೆ ಅಲ್ಲ. ಮುಂದೆ ನಡೆಯೋ ದಿಕ್ಕು ಸ್ವಲ್ಪ ಸ್ಪಷ್ಟವಾದ್ದಕ್ಕೆ ಅಷ್ಟೆ.

**ಪ್ರತಿಕ್ರಿಯಿಸಿ: feedback@sudha.co.in**